(ಇಂದು ದಿನಾಂಕ:09-04-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಎದುರುದಾರರ ನಂ.3 ರವರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ವಿಮಾ ಪಾಲಿಸಿ |
| ನಿ.ಆರ್.3 | ನೋಟೀಸು |
| ನಿ.ಆರ್.4 ಮತ್ತು 5 | ಎರಡು ಅಂಚೆ ರಶೀದಿಗಳು |

**ಪಾಟೀ ಸವಾಲುಃ ಅರ್ಜಿದಾರ_ಪರ_ಶ್ರೀ_ಎಸ್?ಬಿ_ವಕೀಲರಿಂದ_**

1. ಅಂತಿಮ ವರದಿಯಲ್ಲಿ ಎದುರುದಾರ ನಂ.1 ಇವರ ಮೇಲೆ ಆರೋಪ ಮಾಡಲಾಗಿದೆ ಎಂದರೆ ಸರಿ. ಆದರೆ ಅಪಘಾತವು ಮೋ.ಸೈ. ವಾಹನದ ಚಾಲಕನ ತಪ್ಪಿನಿಂದ ಜರುಗಿರುತ್ತದೆ. ಅಪಘಾತವು ಮೋ.ಸೈ. ವಾಹನದ ಚಾಲಕನ ತಪ್ಪಿನಿಂದ ಜರುಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನದಂದು ಅಪಘಾತಪಡಿಸಿದ ಇನೊವಾ ಕಾರಿಗೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಎದುರುದಾರ ನಂ.1 ಇವರಿಗೆ ವಾಹನ ಚಾಲನಾ ಪರವಾನಿಗೆ ಇತ್ತು ಎಂದರೆ ಸರಿಯಲ್ಲ. ಪರಿಹಾರ ಕೊಡಬೇಕಾಗುತ್ತದೆ ಎಂದು ಎದುರುದಾರ ನಂ.1 ಇವರಿಗೆ ವಾಹನ ಚಾಲನಾ ಪರವಾನಿಗೆ ಇಲ್ಲ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಿಮ ವರದಿಯನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸರಿ. ಮೋ.ಸೈ. ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಕಾರ ಚಾಲಕನ ನಿರ್ಲಕ್ಷತನದಿಂದ ಕಾರ ನಡೆಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು